


“ಏನ್ರಪಾ, ಎಷ್ಟಂತ ಹುಡ್ಕೂದು ನಿಮ್ನ, ಒಳ್ಳಾ ಫಜೀತಿ ಮಾಡ್ತೀರಪಾ. ಅಲ್ಲಾ, ಟೈಮ್ ಎಷ್ಟಾತು ಏನ್ಕಥೆ, ಹೊಟ್ಟೆಗೇನರಾ ಹಾಕ್ರಪಾ...” ಅಂತ ಕಾಳಜಿ ಮಾಡುವ ಹಿರೀಕರಂತೆ ದೊಡ್ಡವಾಡ ಸರ್ ಹತ್ತಿರ ಬರುತ್ತಿದ್ದರೆ ಮಾಧವಿಗೆ ಮೈ ತುಂಬ ಕೆಂಜಿರುವೆಗಳು ಕಚ್ಚಿದಂತಾಗುತ್ತಿತ್ತು. ಪುಣ್ಯಾತ್ಮ, ಕೆಲವೊಮ್ಮೆ ಅದೆಷ್ಟು ಹತ್ತಿರ ಬರುತ್ತಿದ್ದನೆಂದರೆ ಅವನ ಹೊಟ್ಟೆ ಎಲ್ಲಿ ನನ್ನ ತಟ್ಟಿಬಿಡುತ್ತದೋ ಅನ್ನುವಷ್ಟು. “ಮಾಧವಿ ಮೇಡಂನೋರೆ, ಜರಾ ಬರ್ರಿ ಇಲ್ಲಿ. ಅಲ್ನೋಡಿ ಅಲ್ನೋಡಿ” ಅಂತ ಈತ ವಿದ್ಯಾರ್ಥಿಗಳಿಲ್ಲದ ಮಧ್ಯಾಹ್ನ ಯಾವುದೋ ಮೂಲೆಯ ರೂಮಿನ ಕಿಡಕಿಯಿಂದ ಸಂಶೋಧಕನ ಗಾಂಭೀರ್ಯದಲ್ಲಿ ತೋರಿಸಿದರೆ, ಆ ಅತ್ತಲಿಗೆ ಯಾವುದೋ ಹುಡುಗಿ ಯಾವುದೋ ಹುಡುಗನೊಂದಿಗೆ ಸಾಗವಾನಿ ಮರದ ನೆರಳಲ್ಲದ ನೆರಳಲ್ಲಿ ಅದೇನೋ ಮಾತಾಡುತ್ತ ನಿಂತ ಚಿತ್ರವಿರುತ್ತಿತ್ತು. ಹುಡುಗ ಹುಡುಗಿಯರು ಪರಸ್ಪರ ಗೌರವದಿಂದ ನಿಂತು–ಕುಂತು ಮಾತನಾಡುವ ಅವಕಾಶವನ್ನು ಕ್ಯಾಂಪಸ್ ಕೊಟ್ಟಿದ್ದರೆ, ಅವರು ಹೀಗೆ ಕಳ್ಳರಂತೆ ಆ ಬಿಸಿಲಲ್ಲಿ ನಿಲ್ಲಬೇಕಾದ ಜರೂರತ್ತಿತ್ತೇ? ಅನ್ನಿಸುತ್ತಿತ್ತು ಮಾಧವಿಗೆ. ಕಾಲ ಬದಲಿ ಆಗ್ಯಾದ್ರೀ ಮ್ಯಾಡಂ. ನೀವು ಇನ್ನೂತನ ಹೆಣ್ಮಕ್ಳು ಶೋಷಣೆ ಅಂತ ಬಡಬಡಿಸುದ್ರಾಗ ಉಳದೇರಿ. ಮಾ ಬೆರಕಿ ಅದಾವ್ರಿ ಇವು. ಇನ್ನ ಒನ್ನಕ್ಕ ಅದಾರ. ಫೈನಲ್ ಬರೋಟಗಿ ಒಂದಾ ಓಡಿ ಹೊಕ್ಕಾರ. ಇಲ್ಲ ತೊಟ್ಲ ತೂಗಸ್ತಾರ–ದೊಡ್ಡವಾಡ ಸರ್ ಬಾಯಾಗಿಂದ ಯಾವಾಗ್ಲೂ ಇವೇ ಆಣಿಮುತ್ತುಗಳು. ಸಾಕಾಗಿ ಹೋಗಿದೆ ಮಾಧವಿಗೆ. ಇವನ ಉದ್ದೇಶ ಆ ಮಕ್ಕಳನ್ನು ಹಂಗಿಸುವುದು ಅಷ್ಟೇ ಅಲ್ಲ, ಕೊರಳಲ್ಲಿ ಕರಿಮಣಿ ಇರದ ತನ್ನನ್ನು ಇಂತಹ ದೃಶ್ಯಗಳಿಂದ, ಘಟನೆಗಳಿಂದ, ಮಾತುಗಳಿಂದ ಮತ್ತೆ ಮತ್ತೆ ಅಲ್ಲಾಡಿಸಿ, ಎಂದೂ ಕೆಂಪಡರದ ಕಂದು ಮುಖದಲ್ಲಿ ಲಜ್ಜೆಯ ಕೆಂಪು ಉಕ್ಕೀತೆ ಎಂದು ಸಂಶೋಧಿಸುವುದು ಅವನ ಅತ್ಯಾಪ್ತ ಕೆಲಸಗಳಲ್ಲಿ ಒಂದಾಗಿದೆ ಎಂದು ಅವಳೆಂದೋ ತೀರ್ಮಾನಿಸಿದ್ದಾಳೆ. ಕರ್ಮಕ್ಕೆ, ಏಳೆಂಟು ವರ್ಷಗಳ ಸಹೋದ್ಯೋಗದ ಅನುಭವ. ಹಾಗಂತ, ದೊಡ್ಡವಾಡ ಸರ್ ಹಿಂಗ ಅಂತ ಯಾರದರ ಮುಂದ ಆಡಿದ್ರ, ಊಹೂಂ ಒಂದ್ss ಒಂದು ನರಮನಶ್ಯಾರೂ ಒಪ್ಪಗೊಳಾಕಿಲ್ಲ. ಬದಲಿಗೆ, ಪಾಪ, ಲಗ್ನಾ ಗಿಗ್ನಾ ಆಗದ ಜೀಂವಾ. ಏನೋ ಒದರಕೋತೇತಿ–ಅಂತ ಮಾಧವಿಯ ಬಗ್ಗೆಯೇ ಕರುಣಾರ್ದ್ರವಾದ ವ್ಯಾಖ್ಯಾನ ಮಾಡಿಯಾರು. ನಿಂತರೆ ಕೂಡಲಿಕ್ಕಾಗದ, ಕೂತರ ನಿಲ್ಲಲಿಕ್ಕಾಗದ, ಬಿಳಿ ಕೂದಲ ತೋರಮ್ಮೆ ದೊಡ್ಡವಾಡ ಸರ್ ಬಗ್ಗೆ ಈಗ ಅವರ ಹೆಂಡತಿಯೂ ಅನುಮಾನಿಸಲಾರಳು. ಹಾಗಾಗಿ ಯಾರಾದರೂ ಇಂತಹ